**ಕರ್ನಾಟಕ ಸರ್ಕಾರ**

***ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.***

ಸಂಖ್ಯೆ: ಶೈಶಾ-04/ಉ.ಉ.ಪ್ರಾ ಆ ಮಾ/2015-16 ದಿನಾಂಕ: 11-08-2015

ಉಪ ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

---

ಮಾನ್ಯರೆ,

ವಿಷಯ: 2015-16ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ / ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರು/ಪ್ರಾಂಶುಪಾಲರಿಗೆ ಉತ್ತಮ ಉಪನ್ಯಾಸಕರು/ಪ್ರಾಂಶುಪಾಲರ ಪ್ರಶಸ್ತಿಗಾಗಿ ಆಯ್ಕೆಮಾಡಲು ಅರ್ಹ ಉಪನ್ಯಾಸಕರು/ಪ್ರಾಂಶುಪಾಲರ ಪಟ್ಟಿಯನ್ನು ಸಲ್ಲಿಸುವ ಕುರಿತು.

* * *

ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆಯು ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಾ ಬಂದಿರುತ್ತದೆ. ಪದವಿ ಪೂರ್ವ ಶಿಕ್ಷಣವು ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಬಹಳ ಮುಖ್ಯ ಘಟ್ಟವಾಗಿರುತ್ತದೆ. ಈ ಹಂತದಲ್ಲಿ ವಿದ್ಯಾರ್ಥಿಗಳ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳುವ ಅತೀಮುಖ್ಯವಾದ ಪಾತ್ರವನ್ನು ಶಿಕ್ಷಕರು ವಹಿಸಿಕೊಂಡಿರುತ್ತಾರೆ. ರಾಜ್ಯದಲ್ಲಿ ಸುಮಾರು 15 ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರಥಮ ಹಾಗೂ ದ್ವಿತೀಯ ಪಿಯುಸಿಯಲ್ಲಿ ವಿದ್ಯಾರ್ಥಿಗಳು ವಿದ್ಯಾರ್ಜನೆ ಮಾಡುತ್ತಿದ್ದಾರೆ. ಈ ವಿದ್ಯಾರ್ಥಿಗಳ ಹಿತವನ್ನು ಸದಾ ಬಯಸುವ / ಭವಿಷ್ಯವನ್ನು ರೂಪಿಸುವ / ಮಾರ್ಗದರ್ಶನ ನೀಡುತ್ತಿರುವ ಉಪನ್ಯಾಸಕರನ್ನು/ ಪ್ರಾಂಶುಪಾಲರನ್ನು ಗುರುತಿಸಿ ಗೌರವಿಸುವ ಮೂಲಕ ಪ್ರೋತ್ಸಾಹಿಸುವುದು ಸಮಾಜದ ಒಂದು ಭಾಗವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು 2015-16ನೇ ಶೈಕ್ಷಣಿಕ ಸಾಲಿಗೆ ಪದವಿ ಪೂರ್ವ ಶಿಕ್ಷಣ ಹಂತದಲ್ಲಿ ಸರ್ಕಾರಿ/ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಭೋದಿಸುತ್ತಿರುವ/ಉತ್ತಮ ಆಡಳಿತ ನಿರ್ವಹಿಸುತ್ತಿರುವ ಪ್ರಾಂಶುಪಾಲರಿಗೆ, ಉತ್ತಮ ಉಪನ್ಯಾಸಕ/ಪ್ರಾಂಶುಪಾಲರಿಗೆ ಶಿಕ್ಷಕ ಪ್ರಶಸ್ತಿಯನ್ನು ನೀಡಲು ಉದ್ದೇಶಿಸಿರುವುದು ಸ್ವಾಗತಾರ್ಹವಾಗಿರುತ್ತದೆ. ಈ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಪ್ರತಿ ವರ್ಷ ಶಿಕ್ಷಕರ ದಿನಾಚರಣೆಯಂದು ನಡೆಸಲು ಸರ್ಕಾರವು ತೀರ್ಮಾನಿಸಿದೆ.

ಆದ್ದರಿಂದ ತಮ್ಮ ಜಿಲ್ಲೆಯಲ್ಲಿನ ಸರ್ಕಾರಿ/ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರು /ಪ್ರಾಂಶುಪಾಲರನ್ನು ಗುರುತಿಸುವ ಗುರುತರ ಜವಾಬ್ದಾರಿ ತಮ್ಮ ಮೇಲೆ ಇರುತ್ತದೆ. ಪ್ರತಿ ಜಿಲ್ಲೆಯಿಂದ ಐವರು (05) ಉತ್ತಮ ಉಪನ್ಯಾಸಕರು ಹಾಗೂ ಒಬ್ಬರು ಪ್ರಾಚಾರ್ಯರನ್ನು, ಕನ್ನಡ, ಆಂಗ್ಲಭಾಷೆ, ಕಲಾ ವಿಭಾಗ, ವಿಜ್ಞಾನ ವಿಭಾಗ ಹಾಗೂ ವಾಣಿಜ್ಯ ವಿಭಾಗದಿಂದ ತಲಾ ಒಬ್ಬರಂತೆ ಉತ್ತಮ ಉಪನ್ಯಾಸಕರನ್ನು ಮತ್ತು ಒಬ್ಬರು ಉತ್ತಮ ಪ್ರಾಚಾರ್ಯರನ್ನು ಆಯ್ಕೆ ಮಾಡಿ Short list ಮಾಡಬೇಕು. ಉತ್ತಮ ಉಪನ್ಯಾಸಕರು/ ಪ್ರಾಂಶುಪಾಲರನ್ನು ಆಯ್ಕೆ ಮಾಡುವಾಗ ಈ ಕೆಳಕಂಡ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಯಾವುದೇ ಕಾರಣಕ್ಕೂ ಯಾವುದೇ ರೀತಿಯ ಸಂಶಯಕ್ಕೆ ಆಸ್ಪದ ನೀಡದಂತೆ ಎಚ್ಚರವಹಿಸಲು ಸೂಚಿಸಿದೆ ಹಾಗೂ **ಇದು ಕಾಲಮಿತಿ ವಿಷಯವಾಗಿರುವುದರಿಂದ ಈ ವಿಷಯದ ಬಗ್ಗೆ ವೈಯಕ್ತಿಕ ಆಸಕ್ತಿಯನ್ನು ವಹಿಸಿ ಕ್ರಮ ಕೈಗೊಳ್ಳಲು ಸೂಚಿಸಿದೆ.**

ಮಾನದಂಡಗಳು:

1. ಸಂಬಂಧಿಸಿದ ವಿಷಯವನ್ನು ಬೋಧಿಸುವ ಉಪನ್ಯಾಸಕರು/ಪ್ರಾಂಶುಪಾಲರ ದ್ವಿತೀಯ ಪಿಯುಸಿಯಲ್ಲಿ ಕಳೆದ 5 ವರ್ಷಗಳು 40 ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆಗೆ ಹಾಜರಾಗಿರಬೇಕು. ಕಳೆದ 5 ವರ್ಷಗಳ ದ್ವಿತೀಯ ಪಿಯುಸಿ ಫಲಿತಾಂಶ ಶೇಕಡ 90 ಕ್ಕಿಂತ ಹೆಚ್ಚು ಇರಬೇಕು. (ಎಲ್ಲಾ ಪೂರಕ ದಾಖಲೆಗಳೊಂದಿಗೆ)
2. ಸಂಬಂಧಿಸಿದ ಉಪನ್ಯಾಸಕರು/ಪ್ರಾಂಶುಪಾಲರ ವಿಷಯದಲ್ಲಿ ವಿನೂತನ ಶೈಲಿಯ (Innovative Method of Teaching)ನ್ನು ಅಳವಡಿಸಿಕೊಂಡಿರಬೇಕು ಪ್ರಾಂಶುಪಾಲರು ಆಗಿದ್ದಲ್ಲಿ ಸಂಸ್ಥೆಯ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿರುವಂತಹ ಕಾರ್ಯಗಳನ್ನು ಮಾಡಿರಬೇಕು. (ಎಲ್ಲಾ ದಾಖಲೆಗಳೊಂದಿಗೆ)
3. ಸಂಸ್ಥೆಯ/ಕಾಲೇಜಿನ ಬೆಳವಣಿಗೆಯಲ್ಲಿ ಉಪನ್ಯಾಸಕರ/ಪ್ರಾಂಶುಪಾಲರ ಮುಂದಾಳತ್ವ ಗುಣ(ಕಾಲೇಜು ಅಭಿವೃದ್ಧಿ ಸಮಿತಿ/ದಾನಿಗಳು ಇತರೆ ಸಂಘ ಸಂಸ್ಥೆಗಳಿಂದ ಕಾಲೇಜುಗಳ ಕೊಠಡಿ/ಪೀಠೋಪಕರಣ/ ಪಾಠೋಪಕರಣ/ ಪುಸ್ತಕಗಳು/ ಪ್ರಯೋಗಾಲಯ ಉಪಕರಣಗಳು/ ಇತರೆ ಮೂಲಭೂತ ಸೌಕರ್ಯ ಕಲ್ಪಿಸಿರುವ ದಾಖಲೆ ಒದಗಿಸುವುದು)
4. ಸಂಬಂಧಿಸಿದ ಉಪನ್ಯಾಸಕರು/ಪ್ರಾಂಶುಪಾಲರು ಕಳೆದ 5 ವರ್ಷಗಳಲ್ಲಿ ಎನ್‌ಎಸ್‌ಎಸ್/ಎನ್‌ಸಿಸಿ/ಕ್ರೀಡೆ/ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು .ರಾಜ್ಯಮಟ್ಟ, ರಾಷ್ಟ್ರಮಟ್ಟ ಹಾಗೂ ಅಂತರಾಷ್ಟ್ರ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಿ ವಿದ್ಯಾರ್ಥಿಗಳು ಪಡೆದ ಪದಕ/ಪಾರಿತೋಷಕ ಮತ್ತು ಬಹುಮಾನಗಳ ವಿವರ ದಾಖಲೆಗಳನ್ನು ಒದಗಿಸುವುದು.
5. ಸಮಯ ಪ್ರಜ್ಞೆ, ಹಿರಿಯ ಅಧಿಕಾರಿಗಳೊಂದಿಗೆ ಸೌಜನ್ಯತೆಯಿಂದ ನಡೆದುಕೊಳ್ಳುವುದು.
6. ಸರ್ಕಾರ/ಸಂಘ ಸಂಸ್ಥೆಗಳಿಂದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ/ಧನಸಹಾಯ/ಪುಸ್ತಕಗಳ ಸೌಲಭ್ಯಗಳ ಬಗ್ಗೆ ಉತ್ತೇಜನ ನೀಡುವುದು.
7. ಸೇವೆಗೆ ಸೇರಿದ ದಿನಾಂಕದಿಂದ ಯಾವುದೇ ಇಲಾಖೆ ವಿಚಾರಣೆಗೆ ಒಳಪಟ್ಟು ಶಿಕ್ಷೆಯಾಗಿರಬಾರದು.

ಮೇಲಿನ ಪ್ರತಿ ಅಂಶಕ್ಕೆ ತಲಾ ಗರಿಷ್ಠ 10 ಅಂಕಗಳನ್ನು ನಿಗದಿಪಡಿಸಿ ಮೌಲ್ಯಮಾಪನ ಮಾಡಲು ತಿಳಿಸಿದೆ. ಮೇಲಿನ ಎಲ್ಲಾ 07 ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಉಪನಿರ್ದೇಶಕರು ತಮ್ಮ ನೇತೃತ್ವದಲ್ಲಿ ಆಯಾ ಜಿಲ್ಲೆಯ ಸರ್ಕಾರಿ/ಅನುದಾನಿತ ಪದವಿ ಪೂರ್ವ ಕಾಲೇಜುಗಳ ಹಿರಿಯ ಇಬ್ಬರು ಪ್ರಾಂಶುಪಾಲರು ಹಾಗೂ ಹಿರಿಯ ಉಪನ್ಯಾಸಕರುಗಳನ್ನೊಳಗೊಂಡ ಸಮಿತಿಯನ್ನು ರಚಿಸಬೇಕು ಈ ಸಮಿತಿಯು ಜಾಗರೂಕತೆಯಿಂದ ಮೇಲೆ ಸೂಚಿಸಿರುವ ವಿಷಯಗಳಲ್ಲಿ ತಲಾ ಒಬ್ಬರಂತೆ 05 ಉಪನ್ಯಾಸಕರನ್ನು ಹಾಗೂ ಒಬ್ಬರು ಪ್ರಾಂಶುಪಾಲರನ್ನು ನ್ಯಾಯಸಮ್ಮತವಾಗಿ ಆಯ್ಕೆ ಮಾಡಿ Short list ಸಿದ್ಧಪಡಿಸಬೇಕು. ನಿಮ್ಮ ಆಯ್ಕೆಯನ್ನು ಸಮರ್ಥಿಸಿ ಪ್ರತಿಯೊಬ್ಬ ಉತ್ತಮ ಉಪನ್ಯಾಸಕ/ಪ್ರಾಂಶುಪಾಲರ ಬಗ್ಗೆ 100 ಶಬ್ದಗಳಲ್ಲಿ ಪ್ರತ್ಯೇಕ ವರದಿಯನ್ನು ಕಡ್ಡಾಯವಾಗಿ ಪಟ್ಟಿಯ ಜೊತೆಯಲ್ಲಿ ಕಳುಹಿಸಬೇಕು. ಈ ಪಟ್ಟಿಯನ್ನು ದಿನಾಂಕ: 20-08-2015 ರೊಳಗೆ ಜಂಟಿ ನಿರ್ದೇಶಕರು(ಶೈಕ್ಷಣಿಕ), ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-12 ಇವರಿಗೆ ಖುದ್ದಾಗಿ ತಲುಪಿಸಲು ಈ ಮೂಲಕ ಸೂಚಿಸಿದೆ.

* ಆಯ್ಕೆಗೊಂಡ ಉಪನ್ಯಾಸಕರ/ಪ್ರಾಂಶುಪಾಲರುಗಳ 02 ಪಾಸ್‌ಪೋರ್ಟ್ ಸೈಜ್ ಭಾವಚಿತ್ರಗಳನ್ನು ಕಡ್ಡಾಯವಾಗಿ ಕಳುಹಿಸಲು ಸೂಚಿಸಿದೆ.

For ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1. ರಾಜ್ಯದ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಸರ್ಕಾರಿ/ಅನುದಾನಿತ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳ ಗಮನಕ್ಕೆ ತರಲು-ಮುಂದಿನ ಕ್ರಮಕ್ಕಾಗಿ
2. ಇ-ಆಡಳಿತ - ಅಂತರ್ ಜಾಲದಲ್ಲಿ ಅಳವಡಿಸಲು
3. ಕಚೇರಿ ಪ್ರತಿ